## ದೇವಸ್ಥಾನಗಳ ಹೆಚ್ಚುವರಿ ಆದಾಯ

214 (205) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸೂರತ್ಕಲ್) ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ದೇವಸ್ಥಾನಗಳಿಗೆ ಬಂದ ಹೆಚ್ಚುವರಿ ಆದಾಯವನ್ನು ಸ್ಥಳೀಯ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಲು ಅವಕಾಶವಿದೆಯೇ; ಇದ್ದಲ್ಲಿ, ಅದರ ಮಾನದಂಡಗಳೇನು;

ಆ) ಇಂತಹ ಹೆಚ್ಚುವರಿ ಆದಾಯವನ್ನು ದೇವಸ್ಥಾನಗಳ ಸಂಪರ್ಕ ರಸ್ತೆಗಳ ಅಭಿವೃದ್ಧಿಗೆ ಉಪಯೋಗಿಸಲು ಅವಕಾಶ ಮಾಡಿಕೊಡಲಾಗುತ್ತಿದೆಯೇ;

ಇ) ಹೌದಾದಲ್ಲಿ, ಅನುಸರಿಸಲಾಗುತ್ತಿರುವ ನಿಯಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಹೆಚ್ಚುವರಿ ಆದಾಯ ಬರುವ ಅಧಿಸೂಚಿತ ಸಂಸ್ಥೆಗಳ ಆದಾಯವನ್ನು ಆಯಾ ದೇವಾಲಯದ ಅಭಿವೃದ್ಧಿಗೆ ಬಳಸಬಹುದೇ ಹೊರತು ಅದನ್ನು ಸ್ಥಳೀಯ ಅಭಿವೃದ್ಧಿ ಕಾಮಗಾರಿಗೆ ಬಳಸಲು ಕರ್ನಾಟಕ ಹಿಂದೂ ಧರ್ಮಾದಾಯ ದತ್ತಿಗಳ ಕಾಯ್ದೆ 1997 ಮತ್ತು ನಿಯಮ 2002ರಲ್ಲಿ ಅವಕಾಶವಿಲ್ಲ.

ಆ) ಮೇಲ್ಕಂಡ ಉತ್ತರದ ಹಿನ್ನಲೆಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

## ರಾಜ್ಯದಲ್ಲಿ ವೃತ್ತಿ ತೆರಿಗೆ ವಿಧಿಸುತ್ತಿರುವ ಬಗ್ಗೆ

215 (211) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸೂರತ್ಕಲ್) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿವಿಧ ವೃತ್ತಿಯಲ್ಲಿರುವ ನೌಕರ ವರ್ಗಕ್ಕೆ ನಿಗಧಿಪಡಿಸಲಾಗಿರುವ ವಿವಿಧ ಹಂತಗಳ ಸಂಬಳದ ಮೊತ್ತವೆಷ್ಟು;

ಆ) ಮಾಹೆಯಾನ ರೂ. 200 ಗಳ ವೃತ್ತಿ ತೆರಿಗೆಯ ಗರಿಷ್ಟ ಎಂದು ನಿಗದಿಪಡಿಸಲಾಗಿದೆಯೆ;

ಇ) ಹಾಗಿದ್ದಲ್ಲಿ, 20,000 ರೂ.ಗಳಿಗಿಂತ ಹೆಚ್ಚಿಗೆ ಸಂಬಳ ಪಡೆಯುವ ವಿವಿಧ ನೌಕರರ ವರ್ಗಗಳಿಗೂ ಹೆಚ್ಚಿನ ತೆರಿಗೆ ವಿಧಿಸಲು ಸರಕಾರದ ನಿಲುವು ಏನು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

ಅ) ವೃತ್ತಿ ತೆರಿಗೆ, ಎಲ್ಲಾ ವೃತ್ತಿಯಲ್ಲಿರುವ ಅಂದರೆ ಸರ್ಕಾರಿ ಹಾಗೂ ಖಾಸಗಿ ನೌಕರರಿಗೂ, ಅನ್ವಯವಾಗುತ್ತದೆ. ಆದ್ದರಿಂದ, ಇವರುಗಳಿಗೆ ಸಂಬಳ ನಿಗದಿಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ, ಅವರುಗಳ ಒಟ್ಟು ಸಂಬಳದ ಆಧಾರದ ಮೇಲೆ ಈ ಕೆಳಗೆ ನೀಡಿರುವ ದರದಲ್ಲಿ ವೃತ್ತಿ ತೆರಿಗೆಯನ್ನು ವಿಧಿಸಲಾಗಿದೆ.

| ಕ್ರ.ಸಂ. | ವ್ಯಕ್ತಿಗಳ ದರ್ಜೆ | ತೆರಿಗೆ ದರ |
|---|---|---|
| | ಸಂಬಳ ಅಥವಾ ಕೂಲಿ ಪಡೆಯುವವರು ಅಥವಾ ಎರಡನ್ನು ಸೇರಿ ತಿಂಗಳಿಗೆ ಪಡೆಯುವವರು | (ಮಾಸಿಕ) |
| 1. | ರೂ. 3000/– ಕ್ಕಿಂತ ಜಾಸ್ತಿ ಆದರೆ ರೂ. 5000/– ಕ್ಕಿಂತ ಕಡಿಮೆ | ರೂ. 30/– |